ಸಮಾಜದಲ್ಲಿರುವ ಅಸ್ಪೃಶ್ಯರ ಸಮಸ್ಯೆಗಳ ಬಗ್ಗೆ ಅಂಬೇಡ್ಕರ್ ಅವರ ಚಿಂತನೆಗಳು ಹತ್ತೊಂಬತ್ತು ಇಪ್ಪತ್ತನೇ ಶತಮಾನದ ಚಿಂತಕರಿಂದ ಬೇರೆಯಾಗಿದ್ದವು. ಗಾಂಧೀಜಿಯವರ ಅಸ್ಪೃಶ್ಯತಾ ನಿವಾರಣಾ ಆಂದೋಲನ ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ. ಗಾಂಧೀಜಿಯವರ ಪ್ರಯತ್ನ ನಮ್ಮ ಭಾರತೀಯ ಸಂತ ಪರಂಪರೆಯಂತೆ ಸುಧಾರಣಾ ಮನೋಭಾವದ್ದು. ಆದರೆ ಅಂಬೇಡ್ಕರ್ ಅವರ ಚಿಂತನೆಗಳು ಅಸ್ಪೃಶ್ಯತಾ ನಿವಾರಣೆ ಮತ್ತು ಅಸ್ಪೃಶ್ಯರ ವಿಮೋಚನೆಯವು. ಈ ದಿಸೆಯಲ್ಲಿ ಅವರು ತಮ್ಮ ಚಿಂತನೆಗಳನ್ನು ರೂಪಿಸಿದರು.

ಗಾಂಧೀಜಿಯವರು ಅಸ್ಪೃಶ್ಯರ ಸಮಸ್ಯೆಗಳಿಗೆ ಸ್ಪಂದಿಸಿ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆ 'ದೊಡ್ಡ ಕಳಂಕ', 'ದೊಡ್ಡ ಪಾಪ' ಎಂದು ಹೇಳಿದರು. ಅವರಲ್ಲಿ ಪ್ರಾಮಾಣಿಕತೆ ಇತ್ತು. ಆದರೆ ಅವರು ಸೂಚಿಸಿದ ಪರಿಹಾರಗಳು ಸಮಸ್ಯಾತ್ಮಕವಾಗಿದ್ದವು. ಗಾಂಧೀಜಿಯವರಿಗೆ, ಅಸ್ಪೃಶ್ಯರೆಲ್ಲಾ ಒಗ್ಗಟ್ಟಾಗಿ ಹೋರಾಡಬೇಕು ಎಂಬುದಕ್ಕೆ ಬದಲಾಗಿ ಮೇಲುಜಾತಿಗಳು ಹೃದಯ ಪರಿವರ್ತನೆ ಮಾಡಿಕೊಳ್ಳಬೇಕೆಂಬ ಮನೋಭಾವ ಇತ್ತು. ಅಸ್ಪೃಶ್ಯರು ತಮ್ಮ ನೈತಿಕ ಮೌಲ್ಯಗಳನ್ನು ಬದಲಾಯಿಸಿಕೊಳ್ಳಬೇಕೆಂದು, ಹಿಂದೂ ಧರ್ಮದ ಚೌಕಟ್ಟಿನಲ್ಲಿಯೇ ಅಸ್ಪೃಶ್ಯತಾ ನಿವಾರಣೆಗೆ ಪರಿಹಾರದ ಮಾರ್ಗಗಳಿವೆ ಎಂದು ಭಾವಿಸಿದ ಗಾಂಧೀಜಿ ದೇವಾಲಯದ ಪ್ರವೇಶದ ಕಾರ್ಯಕ್ರಮ ರೂಪಿಸಿದರು.

ಅಂಬೇಡ್ಕರ್ ಗಾಂಧೀಜಿಯವರಿಗಿಂತ ಭಿನ್ನವಾಗಿ ಯೋಚಿಸಿದರು. ಅಸ್ಪೃಶ್ಯರ ಬದುಕಿನ ಅನುಭವಗಳ ಜೊತೆಗೆ ಹಿಂದೂ ಧರ್ಮದ ಮೌಲ್ಯರಚನೆಯನ್ನು ವಿಶ್ಲೇಷಣೆಗೆ ಒಡ್ಡಿದರು. ಈ ದೃಷ್ಟಿಯಿಂದ ಅಂಬೇಡ್ಕರ್ ಬರೆದಿರುವ 'ಹಿಂದೂ ಧರ್ಮದ ತತ್ವಜ್ಞಾನ' ಎಂಬ ಲೇಖನವನ್ನು ಗಮನಿಸಬೇಕು. ಮಾನವೀಯ ಸಂಬಂಧಗಳಿಗೆ ಮತ್ತು ಮಾನವೀಯ ಮೌಲ್ಯಗಳಿಗೆ ಹಿಂದೂ ಧರ್ಮದಲ್ಲಿ ಜಾಗವೇ ಇಲ್ಲ ಎಂಬ ವಿಶ್ಲೇಷಣೆ ಸೂಕ್ತ ಒಳನೋಟಗಳಿಂದ ಕೂಡಿದೆ. ಸಮಾನತೆ, ಸಹಬಾಳ್ವೆ, ಸಹೋದರತ್ವ ಎಂಬ ಮಾನವೀಯ ಮೌಲ್ಯಗಳನ್ನು ಹಿಂದೂ ಧರ್ಮ ಒಳಗೊಂಡಿಲ್ಲ. ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಶೋಷಿಸುವುದೇ ಹಿಂದೂ ಧರ್ಮದ ತತ್ವ, ಜೊತೆಗೆ ಅಸ್ಪೃಶ್ಯತೆ, ಜಾತಿಪದ್ಧತಿ ತುಂಬಿ ತುಳುಕುತ್ತಿದೆ. ಅಸ್ಪೃಶ್ಯತೆ ಜಾತಿ ಪದ್ಧತಿ, ಒಂದು ಜಾತಿ ಮತ್ತೊಂದು ಜಾತಿಯನ್ನು ಶೋಷಿಸುವುದು, ಅಮಾನವೀಯವಾಗಿ ನಡೆದುಕೊಳ್ಳುವುದು ಇವು ಇಲ್ಲದೆ ಹೋದರೆ ಹಿಂದೂ ಧರ್ಮಶೂನ್ಯ ಎಂದು ಅಂಬೇಡ್ಕರ್ ವಿಶ್ಲೇಷಿಸುತ್ತಾರೆ. ಆದ್ದರಿಂದ ಅಂಬೇಡ್ಕರ್ ಅವರಿಗೆ ಹಿಂದೂ ಧರ್ಮದ ಆಚಾರ ವಿಚಾರಗಳ ಬಗ್ಗೆ ತಿರಸ್ಕಾರ; ಅವುಗಳಲ್ಲಿ ಭಾಗವಹಿಸುವುದು ಕೂಡಾ ಅವಮಾನಕರ ಸಂಗತಿ ಎಂದು ಕರೆಕೊಟ್ಟಿದ್ದಲ್ಲದೆ ಪಶ್ಚಿಮದ ಸಂಸ್ಕೃತಿಯ ಬಗ್ಗೆ ಒಲವು ತೋರಿದರು. ಹಿಂದೂ ಧರ್ಮ ಅಸ್ಪೃಶ್ಯರಿಗೆ ಕೊಡುತ್ತಿರುವ ಹಿಂಸೆಗೆ ಪಶ್ಚಿಮದ ಆಚಾರ ವಿಚಾರಗಳ ಅನುಸರಣೆ ಉತ್ತರವೆಂದು ಭಾವಿಸಿದರು. ಈ ಕಾರಣಕ್ಕಾಗಿಯೇ ಅವರು ಉಡುಗೆ ತೊಡುಗೆಯಲ್ಲಿ ಅಚ್ಚುಕಟ್ಟುತನವನ್ನು ಪಾಲಿಸುತ್ತಿದ್ದರು. ಹೀಗೆ ಅಂಬೇಡ್ಕರ್ ಅವರು ಅಸ್ಪೃಶ್ಯತಾ ನಿವಾರಣೆಗೆ ಹೋರಾಟದ ಮಾರ್ಗಗಳನ್ನು ರೂಪಿಸಿದರು. ಅದಕ್ಕಾಗಿ ಅವರು ರಾಜಕೀಯ ಸ್ಥಾನಮಾನ, ಆರ್ಥಿಕ, ಸಾಮಾಜಿಕ ಸಾಂಸ್ಕೃತಿಕ ಚಿಂತನೆಗಳನ್ನು ಕುರಿತು ಬರೆದರು.

ಅಂಬೇಡ್ಕರ್ ಅವರು ಅಸ್ಪೃಶ್ಯತೆಯನ್ನು ಒಂದು ರಾಷ್ಟ್ರೀಯ ಸಮಸ್ಯೆ ಎಂದು ಭಾವಿಸಿದರು. ವಸಾಹತುಶಾಹಿ ಸಂದರ್ಭದಲ್ಲಿ ಅಸ್ಪೃಶ್ಯತಾ ಸಮಸ್ಯೆಯನ್ನು ಒಂದು ಆಂತರಿಕ ಸಮಸ್ಯೆಯಾಗಿ ಪರಿಗಣಿಸಿ ಇದನ್ನು ಭಾರತೀಯರೇ ತಮ್ಮ ತಮ್ಮಲ್ಲಿ ಪರಿಹರಿಸಿಕೊಳ್ಳಲಿ ಎಂದು ಬ್ರಿಟಿಷರು ಸುಮ್ಮನಾದರು. ಅದು ಅವರಿಗೆ ಲಾಭವೂ ಆಗುತ್ತದೆ ಎಂಬ ನಂಬಿಕೆ. ರಾಷ್ಟ್ರೀಯ ಕಾಂಗ್ರೆಸ್ ಸಹ ಸ್ವಾತಂತ್ರ್ಯದ ಬಗ್ಗೆ ತಲೆಕೆಡಿಸಿಕೊಂಡಷ್ಟು ಸಮಾಜದಲ್ಲಿ ಆಂತರಿಕವಾಗಿ ಬೇರುಬಿಟ್ಟು, ಮನುಷ್ಯ